ಇಲಾಖೆಗಳಲ್ಲಿ ಮುಂದುವರಿಸಬೇಕೋ ಬೇಡವೋ ಎನ್ನುವ ತೊಂದರೆ ಇದೆ ಎಂದು ನಿಮ್ಮ ಅಧಿಕಾರಿಗಳಿಂದಲೇ ತಿಳಿದು ಬಂತು. ಡಿಸ್ ಕಂಟಿನ್ಯೂ ಮಾಡದೇ ಉದ್ಯೋಗಾವಶಕ್ಕೆ ಅವಕಾಶ ಮಾಡಿಕೊಡುವ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರಿಗೆ ಈ ವಿಷಯದ ಬಗ್ಗೆ ಎಷ್ಟು ವಿವೇಚನೆ ಇದೆಯೋ ಅಷ್ಟೇ ವಿವೇಚನೆ ಸರ್ಕಾರಕ್ಕೂ ಇದೆ. ವೃತ್ತಿ ಶಿಕ್ಷಣವನ್ನು ಕಾಲೇಜಿನಲ್ಲಿ ಪ್ರಾರಂಭ ಮಾಡಿದ ಮೇಲೆ ಅಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳಿಗೆ ಉದ್ಯೋಗವನ್ನು ಆದಷ್ಟು ತೀವ್ರವಾಗಿ ಒದಗಿಸ ಬೇಕೆಂದು ಸರ್ಕಾರದ ಆಸಕ್ತಿಯಾಗಿದೆ.

SRI S. H. S. BHAKSHI.—What arrangements have been made for the poor students who pass the vocational diploma courses who cannot continue further studies ? Whether they would be given chance of employment because they cannot continue their studies after the diploma ?

SRI G. B. SHANKAR RAO.—The idea and the spirit behind this vocational course is to see that after two years of study they should either seek employment elsewhere or they should be in a position to self employed. The Government will not help to get employment to them, They should start their own small industry or something like that.

MR. SPEAKAR.—Next question.

Shortage of Primary School Building in Humnabad Taluk

315. SRI A.B. PASAVARAJ PATIL (Lingasugur).—Will the Minister of State for Primay and Secondary Education be pleased to state. -

(a) whether Government is aware that there is scarcity of Primary School buildings in Humnabad taluk.

(b) if so, when expenditious action would be taken about the school buildings?

SMT. NAGAMMA C. KESHAVAMURTHY(Minister of State for Primary and Secondary Education) —

(a) Yes.

(b) steps have been already taken.

ಶ್ರೀ ಎ. ಬಸವರಾಜ ಪಾಟೀಲ್.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಹುಮನಾಬಾದ್ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳ ಕಟ್ಟಡಗಳ ಕೊರತೆ ಇದೆಯೇ ಎಂದು ಕೇಳಿದ್ದಕ್ಕೆ ಸರ್ಕಾರವ ಗಮನದಲ್ಲಿದು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಹೇಳಿದ್ದೀರಿ, ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಹುಮನಾಬಾದ್ ತಾಲ್ಲೂಕಿನಲ್ಲಿ ೫ ಶಾಲೆಗಳಿಗೆ ಕಟ್ಟಡ ಗಳಿಲ್ಲವೆಂದು ವರದಿ ಬಂದಿತ್ತು. ತಾಗಲಿಕ್, ಅಥವಲಗಿ, ಚಿಂದ್‌ಬದಗಿ, ಚಾಮ್‌ನಗರ ಹಾಗೂ ವಜರಿ ಗ್ರಾಮಗಳಂ. ಈ ೫ ಗ್ರಾಮಗಳ ಪೈಕಿ ಚಾಮ್‌ನಗರ ಮತ್ತು ವಜರಿ ಗ್ರಾಮಗಳ ಶಾಲಾ ಕಟ್ಟಡ ಗಳಿಗೆ ಫಂಡ್ ಕೊಟ್ಟು ಕೆಲಸ ನಡೆಯುತ್ತಿದೆ. ಮುಂದಿನ ಮೇ ೨೦೦ ಹೊತ್ತಿಗೆ ಶಾಲಾ ಕಟ್ಟಡಗಳ ಕೆಲಸ ಮುಗಿಯುತ್ತದೆ. ಇನ್ನು ಮೂರು ಗ್ರಾಮಗಳು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆ

ಯಾಗುವುದರಿಂದ, ಅವುಗಳನ್ನು ಬೇರೆ ಕಡೆಗೆ ವರ್ಗ ಮಾಡಿದಮೇಲೆ, ೧೯೮೨-೮೩ರಲ್ಲಿ ಆದ್ಯತೆ ಕೊಟ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಲಾಗುವುದು.

ಶ್ರೀ ಎ. ಬಸವರಾಜ ಪಾಟೀಲ್.—೫ ಹಳ್ಳಿಗಳಲ್ಲಿ ಮಾತ್ರವಲ್ಲ, ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳು ಇಲ್ಲದೇ, ಹಿಂದಿನ ರಾಜರು ಕುದುರೆಗಳನ್ನು ಕಟ್ಟಿ ಹಾಕಲಿಕ್ಕೆ ಇದ್ದಂತ ಜಾಗಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಮಕ್ಕಳು ಕೂಡುವುದಕ್ಕೆ ಸ್ಥಳವಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ, ಅದಕೋಸ್ಕರ ಹೆಚ್ಚು ಹೆಚ್ಚು ಶಾಲೆ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ನಾನು ಈಗಾಗಲೇ ಹೇಳಿದಂತೆ ಮಾನ್ಯ ಸದಸ್ಯರು ಒಂದು ಶಾಲಾ ಕೊಠಡಿ ಇಲ್ಲದೇ ಇರುವಂತ ಹಳ್ಳಿಗಳ ಪಟ್ಟಿಯನ್ನು ಒದಗಿಸಿದರೆ, ೧೯೮೨-೮೩ರಲ್ಲಿ ಆದ್ಯತೆ ಕೊಟ್ಟು ಕಟ್ಟಡಗಳನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ವಿಶೇಷವಾದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶಾಲಾ ಕಟ್ಟಡಗಳು ಇಲ್ಲದೇ ಗಿಡಗಳ ಕೆಳಗಡೆ, ಮಸೀದಿಯಲ್ಲಿ, ಗುಡಿಗಳಲ್ಲಿ ಶಾಲೆಗಳು ನಡೆಯುತ್ತಿವೆ. ಈ ವಿಷಯದ ಬಗ್ಗೆ ಅನೇಕ ಬಾರಿ ಸರ್ಕಾರದ ಗಮನವನ್ನು ಪ್ರಶ್ನೆಗಳ ಮೂಲಕ ಕೇಳಿದ್ದೇವೆ. ಈ ಪ್ರದೇಶಕ್ಕೆ ಒಂದು ವಿಶೇಷವಾದ ಯೋಜನೆಯನ್ನು ಹಾಕಿಕೊಂಡು ಆದ್ಯತೆ ಮೇಲೆ ಶಾಲಾಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ —ಮಾನ್ಯ ಅಧ್ಯಕ್ಷರೇ, ೧೯೮೧-೮೨ರ ಸಾಲಿನಲ್ಲಿ ರಾಜ್ಯದಲ್ಲಿ ೨೫೨೫ ಶಾಲಾ ಕಟ್ಟಡಗಳನ್ನು ಕೆಗೆದುಕೊಂಡಿದ್ದೇವೆ. ಹಿಂದೆ ಎಂದೂ ಇಷ್ಟು ಶಾಲಾ ಕಟ್ಟಡಗಳನ್ನು ತೆಗೆದುಕೊಂಡಿರಲಿಲ್ಲ. ೧೯೮೧-೮೨ ರಲ್ಲಿ ಕೇಂದ್ರ ಸರ್ಕಾರ ವಿಶೇಷ ಕಾಂಪನೆಂಟ್ ಯೋಜನೆ, ಜನರಲ್ ಸ್ಕೀಂ, ಟ್ರೈಬಲ್ಸ್ ಸ್ಕೀಂ, ಜ್ಞಾನ ಮಂದಿರಗಳ ಯೋಜನೆ ಹೀಗೆ ನಾನಾ ಯೋಜನೆಗಳ ಮೂಲಕ ೨೫೨೫ ಶಾಲಾ ಕೊಠಡಿಗಳನ್ನು ಕಟ್ಟುವ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಕಟ್ಟಡಗಳ ಬೇಡಿಕೆ ಏನೇ ದಿನೇ ಜಾಸ್ತಿಯಾಗುತ್ತಿದೆ. ನಮ್ಮ ರಾಜ್ಯದಲ್ಲಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಪ್ರಮಾಣದ ಪ್ರಕಾರ ಆದರೆ, ಒಬ್ಬ ಉಪಾಧ್ಯಾಯನಿಗೆ ೪೫ ವಿದ್ಯಾರ್ಥಿಗಳಂತೆ ಒಂದು ಕೊಠಡಿ ಬೇಕೆಂದರೂ ೩೧,೦೦೦ ಕೊಠಡಿಗಳು ಬೇಕಾಗುತ್ತದೆ. ಇಷ್ಟನ್ನು ಒಂದೇ ವರ್ಷದಲ್ಲಿ ಒಂದೇ ಸಲ ಮಾಡಲಿಕ್ಕೆ ಸಾಧ್ಯವಿಲ್ಲ. ಆದಷ್ಟು ಜಾಗ್ರತೆ ಹಂತ ಹಂತವಾಗಿ ಶಾಲಾ ಕೊಠಡಿಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ವರ್ಷ ಪ್ರಾಥಮಿಕ ಶಾಲಾ ಕೊಠಡಿಗಳಿಗೆ ಆಯವ್ಯಯದಲ್ಲಿ ೬೬ ಲಕ್ಷ ರೂಪಾಯಿಗಳನ್ನು ಜಾಸ್ತಿ ತೆಗೆದು ಕೊಂಡಿದ್ದೇವೆ.

ಶ್ರೀ ಬಸವರಾಜ ಪಾಟೀಲ್.—ಹುಮನಾಬಾದ್ ಮತ್ತು ಚುಟಗುಪ್ಪ ಪಟ್ಟಣಗಳಾದರೂ ಗಿಡದ ಕೆಳಗೆ ಶಾಲೆಗಳನ್ನು ನಡೆಸುತ್ತಿದ್ದಾರೆ, ಈ ವರ್ಷ ಒಂದೆರಡು ಕೊಠಡಿಗಳನ್ನಾದರೂ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ,—ಪಟ್ಟಣ ಪ್ರದೇಶಗಳಲ್ಲಿ ಒಂದು ಶಾಲಾ ಕೊಠಡಿಗೆ ೪,೫೦೦ ರೂಪಾಯಿಗಳನ್ನು ಕೊಡುತ್ತೇವೆ, ಅವರು ಮೊದಲು ವಂತಿಗೆಯನ್ನು ಕೊಡಬೇಕು. ವಂತಿಗೆಯನ್ನು ಕೊಡಿಸಿಕೊಡುವುದಾದರೆ, ಈ ವರ್ಷವೇ ೨೫ ಶಾಲಾ ಕೊಠಡಿಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಪಾಟೀಲ್.—ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಾಲಿಟಿಯವರು ಅರ್ಧಂಭರ್ಧ ಕಟ್ಟಿಸಿರತಕ್ಕ ಶಾಲಾಕಟ್ಟಡಗಳನ್ನು ಮುಗಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಅರ್ಧಂಭರ್ದ ಕಟ್ಟಿಸಿರತಕ್ಕ ಕಟ್ಟಡಗಳ ಸಂಖ್ಯೆ ಬಹಳ ಇದೆ. ಇದಕ್ಕಾಗಿಯೇ ಈ ವರ್ಷ ೨೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆದ್ಯತೆ ಮೇಲೆ ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಪಾಟೀಲ್.—ನಾಲ್ಕುವರೆ ಸಾವಿರ ರೂಪಾಯಿಗಳಲ್ಲಿ ಶಾಲಾಕಟ್ಟಡವನ್ನು ಕಟ್ಟಿಸುವುದಕ್ಕಾಗುವುದಿಲ್ಲ. ಹೆಚ್ಚಿನ ಮೊತ್ತದ ದುಡ್ಡನ್ನು ಒದಗಿಸಿ, ಅಪೂರ್ಣವಾಗಿರತಕ್ಕ ಕಟ್ಟಡಗಳನ್ನು ಪೂರ್ಣಗೊಳಿಸುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈ ವಿಚಾರ ಪರಿಶೀಲನೆಯಲ್ಲಿದೆ.

ಶ್ರೀ ಬೆಕ್ಕಿನಾಳ್ಕರ್.—ಇವತ್ತು ಯಾವ ಹಳ್ಳಿಗೆ ಹೋಗಿ ಬಿದ್ದಿರುವ ಕಟ್ಟಡ ಯಾವುದೆಂದರೆ, ಶಾಲಾ ಕಟ್ಟಡ, ಇಲ್ಲವೇ ಜನತಾ ಮನೆ ಎಂದು ಹೇಳುತ್ತಾರೆ, ಇವುಗಳ ರಿಪೇರಿ ಸಲುವಾಗಿ ಏನಾದರೂ ಒಂದು ಯೋಜನೆ ಮಾಡುತ್ತೀರಾ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ರಿಪೇರಿ ಬಗ್ಗೆ ಕೂಡ ಸಾಕಷ್ಟು ಪತ್ರಗಳು ನಮಗೆ ಬಂದಿವೆ. ಈ ವರ್ಷ ಹೆಚ್ಚಿಗೆ ಹಣವನ್ನು ರಿಪೇರಿಗಾಗಿ ಒದಗಿಸಲಾಗಿದೆ.

Value of Karnataka State Lottery Tickets sold from 1-1-1980 to 30-11-1981

327 SRI PRABHAKAR TELKAR (Chittapur).—Will the Minister for Finance and Tourism be pleased to state.—

(a) the value of Karnataka State Lottery, tickets sold from 1-1-1980 to 30-11-1981 (particulars of each series of tickets be furnished);

(b) the prizes announced for the Lottery tickets sold during the period from 1-1-1980 to 30-11-1981.

(c) the prizes claimed and paid and the amount remaining to be paid (particulars be furnished);

(d) whether there were any claims by more than one for the prize amount; if so, the ticket no. and the amount claimed (particulars be furnished);

(e) the reason for printing two tickets of the same number?

SRI M. VEERAPPA MOILY (Minister for Finance and Tourism).—

(a) Details are furnished in cols. 1 and 5 *vide* Statement is laid on the table

(b) Details are furnished in col. 6 *vide* Statement is laid on the table*

(c) The particulars are furnished in cols. No. 7 to 9 of Statement is laid on the table*

(d) None.

(e) Does not arise.

SRI PRABHAKAR TELKAR.—The lottery tickets of every series are being sold in lakhs and lakhs every year. There may be some cases where the ticket holders who have purchased-may be of Karnataka or may be outside Karnataka, have not claimed the amount and such amounts are with the Government unclaimed for the period which I have given i.e., from 1-1-1980 to 30-11-1981.

---

* Lib No. , dated 23-3-1982